ಮಂಗಳೂರು ಮಹಾನಗರ ಪಾಲಿಕೆಯ ಸಂದಾಯದ ಪಣ

೨೨೦೪. ಶ್ರೀ ಬಿ. ಎಂ. ಇದಿನಬ್ಬ (ಬುಳ್ಳಲ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಗಳೂರು ಮಹಾನಗರ ಪಾಲಿಕೆಗೆ ಆಕ್ಟ್ರಾಯ್ ಇನ್ನಿತರ ಬಾಬಿನಿಂದ ಸರ್ಕಾರದಿಂದ ಬಾಕಿ ಇರುವ ಹಣವೆಷ್ಟು ?

ಆ) ಹಣವಿಲ್ಲದೆ ನಗರಪಾಲಿಕೆಯವರ ಕೆಲವು ಕಾಮಗಾರಿಗಳು ಸ್ಥಗಿತಗೊಂಡಿದ್ದು ಸದರಿ ಬಾಕಿ ಇರುವ ಹಣಕ್ಕಾಗಿ ಸರ್ಕಾರಕ್ಕೆ ಮನವಿ ಸಲ್ಲಿಸಿರುವುದು ನಿಜವೇ ?

ಇ) ಹಾಗಿದ್ದಲ್ಲಿ ಈ ಹಣವನ್ನು ಯಾವಾಗ ಸಂದಾಯ ಮಾಡಲಾಗುವುದು ?

ಶ್ರೀ ಎಂ. ಚಂದ್ರ ಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ೧೯೮೭-೮೮ನೇ ಸಾಲಿನ ಮಂಗಳೂರು ನಗರ ಪಾಲಿಕೆಗೆ ನೀಡಬೇಕಾಗಿದ್ದ ಆಕ್ಟ್ರಾಯ್ ಪರಿಹಾರ ಅನುದಾನದ ಬಾಕಿ ಮೊತ್ತವನ್ನು ಬಿಡುಗಡೆ ಮಾಡಲು ಇದೀಗ ಆದೇಶವನ್ನು ಹೊರಡಿಸಲಾಗಿದೆ ಯಾವುದೇ ಬಾಕಿ ಇಲ್ಲ.

(ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಬಿ. ಎಂ. ಇದಿನಬ್ಬ —ಅಧ್ಯಕ್ಷರೆ, ಮಂಗಳೂರು ಮಹಾನಗರ ಪಾಲಿಕೆಗೆ ಸಲ್ಲಬೇಕಾದಂಥ ಹಣದಲ್ಲಿ ೬೩ ಲಕ್ಷ ರೂಪಾಯಿಗಳು ಸಂದಾಯವಾಗಿವೆ ಮತ್ತು ೯೦ ಲಕ್ಷ ರೂಪಾಯಿ ಬಾಕಿ ಇದೆ ಎಂದು ತಿಳಿದು ಬರುತ್ತದೆ. ಅದನ್ನು ಕೊಡುವುದಕ್ಕೆ ಯಾವಾಗ ಆದೇಶವನ್ನು ಹೊರಡಿಸಿದ್ದೀರಿ ?

ಶ್ರೀ ಎಂ. ಚಂದ್ರ ಶೇಖರ್. —ಅವರಿಗೆ ಸಂದಾಯವಾಗ ಬೇಕಾದ ರೂಪಾಯಿ, ೯೩ ಲಕ್ಷದ ೪೩ ಸಾವಿರ ರೂಪಾಯಿಗಳನ್ನು ನಿನ್ನೆ ತಾನೆ ಬಿಡುಗಡೆ ಮಾಡಲಾಗಿದೆ.

ಶ್ರೀ ಬ್ಲೇಸಿಯಸ್ ಡಿಸೋಜ.—ಮಾನ್ಯ ಸಚಿವರು ಆದೇಶ ಹೊರಡಿಸಲಾಗಿದೆ ಎಂದು ಹೇಳಿದ್ದಾರೆ ಹಾಗೇದ ಮೇಲೆ ಈ ಆದೇಶ ಹೊರಡಿಸುವುದಕ್ಕಿಂತ ಮುಂಚೆ ಎಷ್ಟು ಬಾಕಿಯನ್ನು ಕಾರ್ಪೋರೇಷನ್‌ನವರಿಗೆ ಕೊಡಬೇಕಾಗಿತ್ತು ? ಅದನ್ನು ಅವರಿಗೆ ಯಾವಾಗ ಒದಗಿಸುತ್ತೀರಿ ?

ಶ್ರೀ ಎಂ. ಚಂದ್ರ ಶೇಖರ್.—೯೩ ಲಕ್ಷದ ೪೩ ಸಾವಿರ ರೂಪಾಯಿಗಳನ್ನು. ಅಂದರೆ ಬಾಕಿ ಇದ್ದುದನ್ನು ಕಳುಹಿಸಿದ್ದೇವೆ.

ಶ್ರೀ ಬ್ಲೇಸಿಯಸ್ ಡಿಸೋಜ.—ಅದು ನಮ್ಮ ಕಾರ್ಪೊರೇಶನ್‌ಗೆ ಇನ್ನೂ ಮುಟ್ಟಿಲ್ಲ ಯಾವಾಗ ಮುಟ್ಟುತ್ತದೆ ಎಂದು ಹೇಳುತ್ತೀರಾ ?

ಶ್ರೀ ಎಂ. ಚಂದ್ರ ಶೇಖರ್.—ಆ ಬಾಕಿ ಮೊತ್ತವನ್ನು ನಿನ್ನೆ ಬಿಡುಗಡೆ ಮಾಡಿದ್ದೇವೆ ಎಂದು ಈಗಾಗಲೇ ಹೇಳಿದ್ದೇನೆ.

ಶ್ರೀ ಚಂದ್ರಶೇಖರ್ ಮಾಮನಿ ; ಗೈರು ಹಾಜರು

ಶ್ರೀ ಐ. ಬಿ. ಶಂಕರ್ : ಗೈರು ಹಾಜರು

ಬೆಂಗಳೂರು ನಗರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಗಳಲ್ಲಿರುವ ಪ್ರೈವೇಟ್ ಮತ್ತಿತರ ಖಾಸಗಿ ಸೈಟು ಹಂಚಿಕೆಯ ಸೊಸೈಟಿಗಳ ಬಗ್ಗೆ.

೨೨೦೫. ಶ್ರೀ ಆರ್. ವೆಂಕಟರಾಮಯ್ಯ, (ಮುಳಬಾಗಿಲು).—ಮಾನ್ಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನಗಳನ್ನು ಪಡೆಯಲು ಖಾಸಗೀ ಹಾಗೂ ಇತರ ಸಂಘಗಳೆಷ್ಟು ?

ಆ) ಆ ಪೈಕಿ ಸಂಘಗಳಿಗೆ ಮಾನ್ಯ ಕೊಟ್ಟಿದೆ ಹಾಗೂ ಇನ್ನೂ ಮಾನ್ಯತೆ ಕೊಡಬೇಕಾದ ಸಂಘಗಳೆಷ್ಟು ?

ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಆ ಸಂಘಗಳಿಗೆ ಜಮೀನು ವಿತರಣೆ ಮಾಡಲಂ ಅನುಮತಿ ಕೊಡುವ ಬಗ್ಗೆ ಅನುಸರಿಸುತ್ತಿರುವ ನಿಯಮಗಳೇನು (ಜಮೀನಿನ ವಿವರ ಹಾಗೂ ಸಂಘಗಳ ಹೆಸರುಗಳನ್ನು ತಿಳಿಸುವುದು)

ಈ) ಈ ಸಂಘಗಳು ಹಂಚಲು ಉದ್ದೇಶಿಸಿರುವ ಸೈಟುಗಳ ಸಂಖ್ಯೆ ಎಷ್ಟು ಹಾಗೂ ಇನ್ನೂ ವಿತರಣೆ ಮಾಡಬೇಕಾಗಿರುವ ಸೈಟುಗಳ ಸಂಖ್ಯೆ ಎಷ್ಟು ?

ಶ್ರೀ ಎಂ. ಪಿ. ಪ್ರಕಾಶ್, (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಚಿವರು).—

ಆ) ೪೪

ಆ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಯಾವ ಸಹಕಾರ ಸಂಘಗಳಿಗೂ ಮಾನ್ಯತೆ ಕೊಟಿರುವುದಿಲ್ಲ. ಆದಾಗ್ಯೂ ಕರ್ನಾಟಕ ಸಹಕಾರ ಸಂಘದ ನಿಯಮಾ ವಳಿಯಂತೆ ಸಕ್ಷಮ ಅಧಿಕಾರಿಗಳಿಂದಲ ಸಹಕಾರ ಸಂಘಗಳು ನೊಂದಣಿ ಪಡೆಯು ಬೇಕಾಗುತ್ತದೆ.

ಇ) ಸರ್ಕಾರದ ಆದೇಶ ಸಂಖ್ಯೆ ಪನ ೫೧೩ ಎಂ ಎನ್ ಎಕ್ಸ್ ೮೫, ದಿನಾಂಕ ೧೮-೬-೧೯೮೫ ರ ಆಧಾರದ ಮೇಲೆ ಷರತ್ತುಗಳನ್ನು ವಿಧಿಸಿ ಅರ್ಹತೆ ಮೇರೆಗೆ ಅನುಮತಿ ಕೊಡಲಾಗಿದೆ.

(ವಿವರಗಳ ಪಟ್ಟಿಯನ್ನು ಲಗತ್ತಿಸಿದೆ)

ಈ) ೧೨ ಸಹಕಾರ ಸಂಘಗಳಿಗೆ ೧೨೮೭ ನಿವೇಶನಗಳನ್ನು ಹಂಚಲು, ಬಡಾವಣೆ ನಕ್ಷೆಯನ್ನು ಮಂಜೂರು ಮಾಡಲಾಗಿದೆ.

Name of House Building Coop. Secieties

Sl. No.	Name of the scheme	Extent	Resol.No. & Date	Name of layout	No. of sites as per appd. plan
1	K S.F C. Employees H.B.C.S.	12-00	513/28.9.1934	Hennur Banaswadi	Approved 166 Nos. 511 (Dwellers Units) 166 sites.
2	Army Welfare HBCS ltd	25-00	88/1.12.82	-do-	
3	Widia Employees HBCS	8-00	465/27.8.84	Chandra Layout	
4	BCC Employees HBCS	25-15	524/11.2.82	-do-	
5	Metropolitan CHS Ltd.	15-00	34/1.5.82	BTM Scheme	88 Nos.
6	Bank Office CHS Ltd;	25-00	192/17.11.82	-do-	206
7	BHEL Officers HBCS Ltd.	20-00	4428 / 447 } 20.12.82	Nandini Layout	88 Nos.
8	Bank Officers and Officials HBCS Ltd;	20-00	214/11.1.84	BRM Scheme	239
9	F.T.I. HBCS Ltd;	2-00	349/22.5.84	-do-	
10	Telecom Employees HBCS Ltd;	25-00	283/23.7.84	Ambedkar Layout (K.P. Agrahara)	
11	K.A.S. Officers HBCS Ltd.	10-00	625/28.1.85	BTM & Sarakki Layout	82 Nos.

12	F.C.I. Employees HBCS Ltd.	4-15	1982	Chandra Layout	64
13	N.A.L. HBCS Layout	8-00	291/17.11.82	BTM Layout	94
14	SC and ST HBCS	4-23	591(A)18.1.85	Sarakki	65
15	Bapujinagar Industrial workers HBCS Ltd;	25-13	1982	Chandra Layout	Not approved
16	Prathmesh Apartments HBCS	20-00	1985	RMV Vila	Group Housing
17	Mysore Road Industrial Workers HBCS	4-00	1984	BTM	
		258-34			

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ ಇವರು ನಿವೇಶನ ಪಡೆಯಲು ಅರ್ಜಿ ಸಲ್ಲಿಸಿರುವ ಸಂಘಗಳ ಸಂಖ್ಯೆ ಳಳ ಎಂದು ಕೊಟ್ಟಿದ್ದು ೧೭ ಸಹಕಾರ ಸಂಘಗಳಿಗೆ ಮಾತ್ರ ಜಮೀನನ್ನು ಕೊಡಲಾಗಿದೆ ಎಂದು ಹೇಳಿದ್ದಾರೆ. ಹಾಗಾದರೆ ೧೭ನ್ನು ಬಿಟ್ಟು ಇನ್ನುಳಿದ ಸಂಘಗಳಿಗೆ ಕೊಟ್ಟಿರುವುದನ್ನು ಏಕೆ ಬಚ್ಚಿಟ್ಟಿದ್ದೀರಿ ? ಬೇಕೆಂದೇ ಆ ಪದವನ್ನು ನಾನು ಬಳಸುತ್ತೇನೆ ಏಕೆಂದರೆ ಇವರು ಬಿಟ್ಟಿರುವ ಸಂಘಗಳೆಲ್ಲ ಪ್ರತಿಷ್ಠಿತ ಕೆಲಸಗಳವು. ಆದ್ದರಿಂದಲೇ ಅವರ ಹೆಸರನ್ನು ಕೊಡಲಿಲ್ಲ ಎಂದು ಹೇಳಬೇಕಾಗುತ್ತದೆ. ಹೋದ ಸಲ ೧ ಲಕ್ಷದ ಮೇಲೆ ಸಾವಿರ ನಿವೇಶನಗಳು ಡಿಮ್ಯಾಂಡ್ ಇದೆ ಎಂದು ಒಪ್ಪಿಕೊಂಡವರು ಇವರೇ, ಆದರೆ ಅದನ್ನು ಮಿಟ್ ಮಾಡಲಾಗುವುದಿಲ್ಲ ಎಂದು ಹೇಳಿದವರೂ ಇವರೇ. ಏಕೆಂದರೆ ಬಿಡಿಎ ಅಕ್ವೈರ್ ಮಾಡಿಕೊಂಡ ಲ್ಯಾಂಡನ್ನೆಲ್ಲ ಪ್ರೈವೇಟ್ ಸೊಸೈಟಿಗಳಿಗೆ ಹಂಚುತ್ತಿದ್ದಾರೆ. ಅಕ್ವೈರ್ ಮಾಡಿಕೊಂಡ ಮೇಲೆ ಬಿಡಿಎ ನೇ ಏಕೆ ಹಂಚಿ ಇತರ ಖಾಸಗಿ ಸಹಕಾರ ಸಂಘಗಳ ಅಕ್ಟಿವಿಟೀಸನ್ನು ಕರ್ಬ್ ಮಾಡುತ್ತಿಲ್ಲ?

ಶ್ರೀ ಎಂ.ಪಿ. ಪ್ರಕಾಶ್,—ಮಾನ್ಯ ಅಧ್ಯಕ್ಷರೇ, ಮಾಹಿತಿಗಳನ್ನು ಪೂರ್ಣವಾಗಿ ತಿಳಿದುಕೊಳ್ಳದೆ ಪ್ರಶ್ನೆ ಕೇಳಿದರೆ ಅವರ ಥರ ಗೊಂದಲಕ್ಕೆ ಸಿಕ್ಕಿಹಾಕಿಕೊಳ್ಳಬೇಕಾಗುತ್ತದೆ. ಅವರು ಕೇಳಿದ್ದು ಬಿಡಿಎನಲ್ಲಿ ನಿವೇಶನಕ್ಕಾಗಿ, ಖಾಸಗಿ ಹಾಗೂ ಇತರ ಸಹಕಾರ ಸಂಘಗಳು ಎಷ್ಟಿವೆ ಎಂದಿದ್ದಕ್ಕೆ ನಾನು ಳಳ ಅರ್ಜಿ ಸಲ್ಲಿಸಿವೆ ಎಂದಿದ್ದೇನೆ. ಈಗ ಅವರು ಹೇಳುತ್ತಿರುವುದನ್ನು ಕೇಳಿದರೆ ಆ ಪ್ರಶ್ನೆಯನ್ನು ಬೇರೆ ಇಲಾಖೆಗೆ ಕಳಿಸಬೇಕಾಗುತ್ತದೆ. ತಪ್ಪು ಪ್ರಶ್ನೆ ಕೇಳುತ್ತಿದ್ದರೆ ಇವರ ಗೊಂದಲವನ್ನೇ ನೋಡಿ ನಾನು ಹಿಂದೆ ಇದರ ಬಗ್ಗೆ ಆರ್ಧ ಗಂಟೆ ಚರ್ಚೆಗೆ ಹಾಕಿ ಎಂದು ಸಲಹೆ ಮಾಡಿದ್ದರೂ ಅವರು ಹಾಗೆ ಮಾಡಲಿಲ್ಲ. ಇದರಲ್ಲಿ ಬಚ್ಚಿಡುವಂಥದ್ದು ಏನೂ ಇಲ್ಲ. ನಿವೇಶನಗಳನ್ನು ೧೭ ಸಂಘಕ್ಕೆ ಮಾತ್ರ ಕೊಟ್ಟಿದ್ದೇವೆ ಎಂದು ಉತ್ತರಿಸಿ ಅರ್ಜಿ ಹಾಕಿದ್ದ ಸಂಘಗಳು ಳಳ ಎಂದು ವಿವರ ಲಗತ್ತಿಸಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ.—ತಾವು ಸ್ವಲ್ಪ ಅರ್ಥಮಾಡಿಕೊಳ್ಳಿ. ಪ್ರಾಧಿಕಾರದಲ್ಲಿ ನಿವೇಶನಗಳನ್ನು ಪಡೆಯಲು ಖಾಸಗಿ ಹಾಗೂ ಇತರ ಸಹಕಾರಿ ಸಂಘಗಳೆಷ್ಟು ಎಂದಿದ್ದಕ್ಕೆ ಳಳ ಎಂದು ನೇರವಾಗಿ ಉತ್ತರ ಕೊಟ್ಟು ಬರೀ ೧೭ನ್ನು ಮಾತ್ರ ಅಲಾಟೆಡ್ ಲಿಸ್ಟ್‌ನಲ್ಲಿ ತೋರಿಸಿದ್ದೀರಿ ನನಗೆ ಗೊತ್ತು, ಈ ರೀತಿ ಆನ್ಸರ್ ಮಾಡಿ ತಪ್ಪಿಸಿಕೊಳ್ಳುತ್ತಾರೆಂದು ನಾನು ಆರ್ಧ ಗಂಟೆ ಚರ್ಚೆಗೆ ಹಾಕಿದ್ದೆ, ಅದು ಮೊನ್ನೆ ಬಂದಿತ್ತು. ಕಾಲಾವಕಾಶ ಬೇಕೆಂದು ನಿನ್ನೆ ತಾರೀಖಿಗೆ ಹೋಗಿದೆ. ಇವರು ಹೋದ ಸಲ ಕೂಡ ರೀಗಿ ಆನ್ಸರ್ ಕೊಟ್ಟರು. ಈಗ ಯಾವ ಗೆಜೆಟ್, ಪೇಪರ್ ನೋಡಿ, ಅಲ್ಲೆಲ್ಲ ಬಿಡಿಎ ಸೊಸೈಟಿಗಳಿಗಾಗಿ ಅಕ್ವೈರ್ ಮಾಡುತ್ತಿದೆ ಎಂದು ಬಂದಿರುತ್ತದೆ, ಎರಡು ತಿಂಗಳಲ್ಲಿ ಏಳೆಂಟು ಓದಿದ್ದೇನೆ. ಇವರು ಸಹಕಾರ ಸಂಘಗಳ ಆಕ್ಟಿವಿಟೀಸನ್ನು ಕಂಟಿನ್ಯೂ ಮಾಡುತ್ತಿದ್ದಾರೆಯೇ ಹೊರತು ಕರ್ಬ್ ಮಾಡುತ್ತಿಲ್ಲ?

ಶ್ರೀ ಎಂ.ಪಿ. ಪ್ರಕಾಶ್,—ಮಾನ್ಯ ಅಧ್ಯಕ್ಷರೆ. ಸೂರಿಪ್ಪತ್ತೆಂಟು ಸಹಕಾರ ಸಂಘಗಳ ವಿವರಗಳನ್ನೂ ಕೇಳಿದ್ದರೆ ನಾನು ಕೊಡುತ್ತಿದ್ದೆ, ಆದರೆ ಇವರು ನಿವೇಶನಗಳು ಮಂಜೂರಾಗಿರುವುದು ಎಷ್ಟಕ್ಕೆ ಎಂದು ಕೇಳಿದ್ದಕ್ಕೆ ೧೭ ಎಂದು ಕೊಟ್ಟಿದ್ದೇನೆ. ನಮ್ಮ ಸರ್ಕಾರ ಬಂದ ಮೇಲೆ ೧೭ರ ಪೈಕಿ ೭ಕ್ಕೆ ಮಾತ್ರ ಹಂಚಿದ್ದು, ಉಳಿದ ಹತ್ತಕ್ಕೆ ಹಿಂದಿನ ಸರ್ಕಾರ ಹಂಚಿತ್ತು. ಯಾವುದೇ ಸಹಕಾರ ಸಂಘಕ್ಕೂ ೨೫ ಎಕರೆಗಿಂತ ಜಾಸ್ತಿ ಕೊಟ್ಟಿಲ್ಲ. ಆದರೂ ಅವರು ಮಾತಾಡುವುದನ್ನು ನೋಡಿದರೆ ಅವರ ಮನಸ್ಸಿನಲ್ಲೆ ಬೇರೆಯೇ ಇದೆ. ನೇರವಾಗಿ ಬುದ್ಧಿವಂತಿಕೆಯಿಂದ ಅವರು ಪ್ರಶ್ನೆ ಹಾಕಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ಇದರಲ್ಲಿ ಬುದ್ಧಿವಂತಿಕೆಯ ಪ್ರಶ್ನೆ ಇಲ್ಲ, ನನಗೆ ಗೊತ್ತಿದೆ ಅವರು ಏನು ಹೇಳುತ್ತಾರೆಂದು ಈಗ ತಮ್ಮ ಹತ್ತಿರ ಬಂದಿರುವ ಖಾಸಗೀ ಸಂಸ್ಥೆಗಳು ಯಾವುದಂ ಅದನ್ನು ಹೇಳಿ. ನಾನು ಬಚ್ಚಿಟ್ಟುಕೊಳ್ಳುವುದು ಬೇಡ ನೀವೂ ಬಚ್ಚಿಟ್ಟುಕೊಳ್ಳುವುದು ಬೇಡ.

ಶ್ರೀ ಎಂ ಪಿ. ಪ್ರಕಾಶ್.—ಯಾವ ಖಾಸಗೀ ವ್ಯಕ್ತಿಗಳಿಗೂ ಕೂಡ ಕೊಟ್ಟಿಲ್ಲ. ಅರ್ಜಿಯನ್ನು ಕೊಟ್ಟಿರತಕ್ಕಂಥ ಳಳ ಸಂಘ ಸಂಸ್ಥೆಗಳಲ್ಲಿ ಶಾಸಕರ ಸಂಘ ಸಂಸ್ಥೆ ಕೂಡ ಇದೆ. ಇದರ ಜೊತೆಗೆ ಬೇಕಾದರೆ ಪೇಪರ್‌ನ್ನು ಕೊಡುತ್ತೇನೆ ಇಲ್ಲವೇ ಓದಿ ಎಂದು ಹೇಳಿದರೆ ಓದುತ್ತೇನೆ. ೧೭ ಜನಗಳಿಗೆ ಮಾತ್ರ ಕೊಟ್ಟಿದ್ದೇವೆ

ಶ್ರೀ ಆರ್. ವೆಂಕಟರಾಮಯ್ಯ.—ಗಿರಿನಗರದ ಕೃಷ್ಣ ಭಟ್ಟರವರಿಗೆ, ಮತ್ತು ಶಾಸ್ತ್ರಿಯವರಿಗೆ ಎಷ್ಟು ಕೊಟ್ಟಿದ್ದೀರಿ ಎಷ್ಟು ಎಕರೆ ಕೊಟ್ಟಿದ್ದೀರಿ.

ಶ್ರೀ ಎಂ ಪಿ. ಪ್ರಕಾಶ್.—ಕೃಷ್ಣ ಭಟ್ಟರಿಗೆ ನಮ್ಮ ಪ್ರಾಧಿಕಾರದ ಪರವಿಯಿಂದ ಯಾವ ಭೂಮಿಯನ್ನೂ ಕೊಟ್ಟಿಲ್ಲ ಆದಕ್ಕೆ ಸಂಬಂಧವಿಲ್ಲ. ವಿಷಯವನ್ನು ಅರ್ಥ ಮಾಡಿಕೊಳ್ಳದೇ ಪ್ರಶ್ನೆ ಕೇಳುತ್ತೀರಿ.

ಅಧ್ಯಕ್ಷರು —ಪ್ರಶ್ನೆ ಸಂಖ್ಯೆ ೭೬೦ (೧೪೮೬) ಸಮಾಜ ಕಲ್ಯಾಣ ಇಲಾಖೆಗೆ ಟ್ರಾನ್ಸ್‌ಫರ್ ಆಗಿದೆ, ಆದ್ದರಿಂದ ಅದನ್ನು ತಡೆಹಿಡಿಯಲಾಗಿದೆ.

ರಾಜ್ಯದಲ್ಲಿ ಜನತಾ ಮನೆಗಳ ನಿರ್ಮಾಣ ಬಗ್ಗೆ

೭೧೮೯. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ವಾಸ್ತ ವಸತಿ ರಾಜ್ಯ ಮಂತ್ರಿಗಳು ಈ ಕೆಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಜನತಾ ಮನೆ ನಿರ್ಮಾಣ ಕಾರ್ಯವು ಹಣದ ಕೊರತೆಯಿಂದ ಸ್ಥಗಿತ ಗೊಂಡಿರುವುದು ನಿಜವೇ ?

ಆ) ಕಳೆದ ವರ್ಷ ನಿರ್ಮಿಸಿ ಪೂರ್ತಿಗೊಂಡ ಜನತಾ ಮನೆಗಳಿಗೆ ಹಣ ಪಾವತಿಯಾಗಿಲ್ಲದಿರುವುದಕ್ಕೆ ಕಾರಣವೇನು ?

ಇ) ಈ ವರ್ಷದ ಜನತಾ ಮನೆಗಳನ್ನು ಕಟ್ಟಲು ಬೇಕಾದ ಹಣವನ್ನು ಯಾವಾಗ ನಿಡಲಾಗುವುದು ?

ಶ್ರೀ ಮೊಹಮ್ಮದ್ ಮೊಯಿನುದ್ದೀನ್ (ವಸತಿ ರಾಜ್ಯ ಸಚಿವರು).—

ಅ) ಇಲ್ಲ.

ಆ) ಕಳೆದ ವರ್ಷದಲ್ಲಿ ಅಂದರೆ ೧೯೮೭-೮೮ನೇ ಸಾಲಿನಲ್ಲಿ ಜನತಾ ವಸತಿ ಯೋಜನೆಗೆ ಒಟ್ಟು ಪಾಯಧನ ರೂ ೧೨೩೬.೭೫ ಲಕ್ಷಗಳನ್ನು ಒದಗಿಸಲಾಗಿತ್ತು ಇದರಲ್ಲಿ ರೂ. ೧೨೩೫.೨೮ ಲಕ್ಷಗಳನ್ನು ಸರ್ಕಾರ ಬಿಡುಗಡೆ ಮಾಡಿದೆ (ಬೆಂಗಳೂರು ನಗರ ಜಿಲ್ಲೆಯನ್ನುಳಿದು).

ಇ) ೧೯೮೮-೮೯ನೇ ಸಾಲಿನಲ್ಲಿ ಅಂದರೆ ಪ್ರಸ್ತುತ ವರ್ಷದಲ್ಲಿ ಈ ಯೋಜನೆಗೆ ಸಹಾಯಧನ ರೂ ೧೩೦೯.೧೪ ಲಕ್ಷಗಳನ್ನು ಒದಗಿಸಲಾಗಿದೆ, ಅದರಲ್ಲಿ ರೂ. ೩೫೫.೯೦ ಲಕ್ಷಗಳನ್ನು ಸರ್ಕಾರ ಬಿಡುಗಡೆ ಮಾಡಿದೆ (ಬೆಂಗಳೂರು ನಗರ ಜಿಲ್ಲೆಯನ್ನುಳಿದು).

ಶ್ರೀ ಕೆ ವಸಂತ ಬಂಗೇರ.—೧೯೮೭-೮೮ರಲ್ಲಿ ೧೨೩೫.೨೮ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಕಳೆದ ವರ್ಷದ ಹಣ ಬಾರದೇ ಅನೇಕ ಮನೆಗಳು ಬಿದ್ದು ಹೋಗಿವೆ ಅಷ್ಟೇ ಅಲ್ಲ ಎಷ್ಟೋ ಕಡೆ ಬಿ.ಡಿ.ಓ. ಹತ್ತಿರ ಹೋಗಿ ವಿಚಾರಿಸಿದಾಗ ಹಣ ಬಂದಿಲ್ಲವೆಂದು ಅವರು ತಿಳಿಸುತ್ತಾರೆ. ಇಲ್ಲಿ ಹಣ ಬಿಡುಗಡೆಯಾಗಿದೆ ಎಂದು ಹೇಳುತ್ತಿದ್ದೀರಿ ಈ ಹಣ ಎಲ್ಲಿಗೆ ಹೋಗಿದೆ. ಇನ್ನು ೧೯೮೮-೮೯ರಲ್ಲಿ ೧೩೦೯ ೧೪ ಲಕ್ಷಗಳನ್ನು ಒದಗಿಸಲಾಗಿದ್ದು ಅದರಲ್ಲಿ ೩೫೫.೯೦ ಲಕ್ಷಗಳನ್ನು ಬಿಡುಗಡೆ ಮಾಡಿದೆ ಎಂದು ಹೇಳಿದ್ದೀರಿ. ಅದರ ಬಗ್ಗೆ ಕೂಡ ವಿಚಾರಿಸಿದರೆ ಆ ಹಣ ಬಂದಿಲ್ಲವೆಂದು ಹೇಳುತ್ತಾರೆ. ಆ ದುಡ್ಡು ಎಲ್ಲಿಗೆ ಹೋಗಿದೆ.

ಶ್ರೀ ಮಹಮ್ಮದ್ ಮೊಯಿನುದ್ದೀನ್.—ಅದರಲ್ಲಿ ಸರ್ಕಾರ ಬಿಡುಗಡೆ ಮಾಡಿರುವ ಹಣವನ್ನು ತೋರಿಸಿದ್ದೇವೆ. ಆದು ಬಿ.ಡಿ.ಓ. ಆಫೀಸಿಗೆ ಮುಟ್ಟಿರಬೇಕು ಬೇರೆ ಯಾವ ಆಫೀಸಿಗೂ ಮುಟ್ಟುವ ಹಾಗಿಲ್ಲ. ಇದರ ಬಗ್ಗೆ ಏನಾಗಿದೆ ಎಂದು ತಿಳಿದು ನಾನು ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಕೆ ವಸಂತ ಬಂಗೇರ —ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿಮ್ಮ ಹಣ ಸಮಯಕ್ಕೆ ಸರಿಯಾಗಿ ಬಾರದೆ ಮಳೆಗೆ ಅನೇಕ ಜನತಾ ಮನೆಗಳು ಕುಸಿದು ಬಿದ್ದಿದೆ ನಾವು ತಪ್ಪು ಗಮನಕ್ಕೆ ಬಂದಿದೆಯೋ ತೊಂದರೆಗೆ ಒಳಗಾದವರಿಗೆ ಯಾವ ರೀತಿಯಲ್ಲಿ ಸಹಾಯ ಮಾಡುತ್ತೀರಿ, ಕಳೆದ ವರ್ಷ ದುಡ್ಡು ಬಂದಿಲ್ಲ ಈ ವರ್ಷ ಆಲ್ಲಿ ಮಳೆ ಪ್ರಾರಂಭವಾಗಿದೆ ಗಾಳಿ ಪ್ರಾರಂಭವಾಗಿದೆ. ಜನತಾ ಮನೆಗಳ ಹಣ ಆಲ್ಲಿಗೆ ಬರಬಹುದು ದುರಂತಮಯವಾಗಿದೆ. ಅನೇಕ ಕಡೆ ಮನೆ ಪಂಚಾಯಿತಿಗಳಲ್ಲಿದ್ದು ಹಣ ಕೂಡ ಪೂರ್ತಿ